ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

# ಉಪ ಸಭಾಪತಿ ಸ್ಥಾನಕ್ಕೆ ಸುಮ್ಮನಾಗುತ್ತಾ ಜೆಡಿಎಸ್?

• ಎಸ್. ಲಕ್ಷ್ಮಿನಾರಾಯಣ

- ಹೊಸ ಸಭಾಪತಿಗೆ ಜೆಡಿಎಸ್ ಬೆಂಬಲ
- ಭವಿಷ್ಯದ ರಾಜಕೀಯ ಲಾಭದತ್ತ ಚಿತ್ತ
- ತ್ಯಾಗಕ್ಕೆ ಪ್ರತಿಯಾಗಿ ದೊಡ್ಡ ಹುದ್ದೆಯ ನಿರೀಕ್ಷೆ

ಬೆಂಗಳೂರು: ಸಭಾಪತಿ ಪದಚ್ಯುತಿ ವಿಚಾರದಲ್ಲಿ ಬಿಜೆಪಿಗೆ ಬಹಿರಂಗ ಬೆಂಬಲ ಘೋಷಿಸಿರುವ ಜೆಡಿಎಸ್ ಸಭಾಪತಿ ಸ್ಥಾನಕ್ಕೆ ಪಟ್ಟು ಹಿಡಿಯದೆ ಭವಿಷ್ಯದ ರಾಜಕೀಯ ಲಾಭದತ್ತ ಚಿತ್ತ ಹರಿಸಿದೆ.

ಪರಿಷತ್‌ನ ಜೆಡಿಎಸ್ ಸದಸ್ಯರಲ್ಲಿ ಸಭಾಪತಿ ಸ್ಥಾನಕ್ಕೆ ಪಟ್ಟು ಹಿಡಿದು ಬಸವರಾಜ ಹೊರಟ್ಟಿ ಅವರಿಗೆ ಅವಕಾಶ ಕೊಡಬೇಕೆಂಬ ಅಭಿಪ್ರಾಯವಿದೆ. ಖುದ್ದು ಹೊರಟ್ಟಿ ಅವರಿಗೆ ಆ ಸ್ಥಾನದ ಬಗ್ಗೆ ಆಸಕ್ತಿಯಿದೆ. ಆದರೆ, ಪಕ್ಷದಲ್ಲಿ ಬೇರೆಯದೇ ಲೆಕ್ಕಾಚಾರಗಳು ನಡೆಯುತ್ತಿವೆ.



ಬಿಜೆಪಿ-ಜೆಡಿಎಸ್ ಸಂಬಂಧ ಸುಧಾರಣೆಯ ಮೊದಲ ಹಂತವಾಗಿ ಸಭಾಪತಿ ಸ್ಥಾನ ಬಿಜೆಪಿಗೆ ಬಿಟ್ಟುಕೊಡುವುದು. ಜನವರಿ ನಂತರ ಅಥವಾ ಮುಂದಿನ ಬಜೆಟ್ ನಂತರ ರಾಜ್ಯ ರಾಜಕೀಯದಲ್ಲಿ ಕೆಲವೊಂದು ಬದಲಾವಣೆಯ ಮುನ್ಸೂಚನೆ ದೊರೆತಿದ್ದು ಆಗ ಈಗಿನ ತ್ಯಾಗಕ್ಕೆ ಪ್ರತಿಫಲವಾಗಿ ದೊಡ್ಡ ಹುದ್ದೆಯೇ ಪಡೆಯುವ ಯೋಜನೆಯಿದೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ.

ಈ ಕುರಿತು ಕೇಂದ್ರದ ಬಿಜೆಪಿ ನಾಯಕರ ಬಳಿಯೂ ಈಗಾಗಲೇ ಎರಡು ಮೂರು ಸುತ್ತು ಪ್ರಾಥಮಿಕ ಚರ್ಚೆಗಳು ನಡೆದಿವೆ. ಇದಾದ ನಂತರವೇ ಸಭಾಪತಿ ಪದಚ್ಯುತಿ ವಿಷಯದಲ್ಲಿ ಬಹಿರಂಗ ಬೆಂಬಲ ಘೋಷಿಸಲಾಗಿದೆ.

ಕೇಂದ್ರ ಅಥವಾ ರಾಜ್ಯ ಸರ್ಕಾರದ ತೀರ್ಮಾನಗಳ ವಿಷಯದಲ್ಲಿ ಎಲ್ಲದಕ್ಕೂ ವಿರೋಧ ಮಾಡದೆ ವಿಷಯಾಧಾರಿತವಾಗಿ ಬಿಜೆಪಿಗೆ ಬೆಂಬಲ ನೀಡಲು ಜೆಡಿಎಸ್ ತೀರ್ಮಾನಿಸಿದೆ. ಮುಂದಿನ ದಿನಗಳಲ್ಲಿ ಇದು ಮೈತ್ರಿಯ ಸ್ವರೂಪ ಪಡೆಯಬಹುದು ಎಂದು ಹೇಳಲಾಗಿದೆ.

ಸಭಾಪತಿ ಪದಚ್ಯುತಿ ವಿಚಾರ ಇತ್ಯರ್ಥಗೊಂಡ ನಂತರ ಸಭಾಪತಿ ಸ್ಥಾನ ಬಿಜೆಪಿಗೆ ಬಿಟ್ಟುಕೊಟ್ಟು ಈಗಿರುವಂತೆ ಉಪ ಸಭಾಪತಿ ಸ್ಥಾನದಲ್ಲಿ ಜೆಡಿಎಸ್ ಮುಂದುವರಿಯಲು ಬಯಸಿದೆ. ತೀರಾ ಬಿಜೆಪಿಯವರೇ ಸಭಾಪತಿ ಸ್ಥಾನ ಬಿಟ್ಟುಕೊಡುವುದಾಗಿ ಹೇಳಿದರೆ ಮಾತ್ರ ಒಪ್ಪಬಹುದು. 14 ಸದಸ್ಯರನ್ನು ಹೊಂದಿರುವ ನಾವು ಸಭಾಪತಿ ಸ್ಥಾನ ಕೇಳುವುದು ಸೂಕ್ತವಲ್ಲ ಎಂದು ಪಕ್ಷದ ನಾಯಕರೊಬ್ಬರು ಹೇಳುತ್ತಾರೆ.

## ಇಬ್ರಾಹಿಂ ರಾಜ್ಯಾಧ್ಯಕ್ಷ?

ಬಿಜೆಪಿ ಜತೆ ಸಂಬಂಧ ಸುಧಾರಣೆಗೆ ಪಕ್ಷದ ವಲಯದಲ್ಲಿ ಕೆಲವರ ವಿರೋಧ ಇದ್ದರೂ ಜೆಡಿಎಸ್‌ನ ಬಹುತೇಕ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರು ಪರವಾಗಿದ್ದಾರೆ. ಬಿಜೆಪಿ ಜತೆಗೂಡಿದರೆ ಅಧಿಕಾರ ಸಿಗಬಹುದು. ಕಾರ್ಯಕರ್ತರನ್ನು ಹಿಡಿದಿಟ್ಟುಕೊಳ್ಳಬಹುದು. ಇದರಿಂದ ಪಕ್ಷವೂ ಗಟ್ಟಿಗೊಳ್ಳುತ್ತದೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಬಿಜೆಪಿಗೆ ಬೆಂಬಲವನ್ನು ಸಮರ್ಥಿಸಿಕೊಂಡು ಅಲ್ಪಸಂಖ್ಯಾತರ ವಿರೋಧ ವ್ಯಕ್ತವಾದಂತೆ ನೋಡಿಕೊಳ್ಳುವ ಸಲುವಾಗಿಯೇ ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಅವರನ್ನು ಜೆಡಿಎಸ್‌ಗೆ ಸೆಳೆದು ರಾಜ್ಯಾಧ್ಯಕ್ಷ ಸ್ಥಾನ ನೀಡಲು ಕಾರ್ಯತಂತ್ರ ರೂಪಿಸಲಾಗಿದೆ ಎಂದು ಹೇಳಲಾಗಿದೆ.

**ಅನುಮಾನ:** ಕಾಂಗ್ರೆಸ್ ಸಭಾಪತಿ ಪದಚ್ಯುತಿಗೊಳಿಸಿ ಬಿಜೆಪಿ ಜತೆ ಸೇರಿ ನಾವು ಆ ಸ್ಥಾನ ಪಡೆದುಕೊಂಡೆವು. ಅದಕ್ಕಾಗಿಯೇ ಇಷ್ಟೆಲ್ಲಾ ಮಾಡಲಾಯಿತು ಎಂಬ ಆರೋಪವೂ ಬರಬಹುದು. ಅದರ ಬದಲು ಈಗಿರುವಂತೆಯೇ ಮುಂದುವರಿಯುವುದು ಸೂಕ್ತ ಎಬ ಅಭಿಪ್ರಾಯವೂ ಇದೆ. ಈ ವಿಚಾರದಲ್ಲಿ ಎಚ್.ಡಿ.ದೇವೇಗೌಡರು ಹಾಗೂ ಎಚ್.ಡಿ.ಕುಮಾರಸ್ವಾಮಿ ನಿರ್ಧಾರವೇ ಅಂತಿಮವಾಗಲಿದೆ ಎಂದು ಅವರು ತಿಳಿಸುತ್ತಾರೆ.

ಈಮಧ್ಯೆ, ಗೋಹತ್ಯೆ ನಿಷೇಧ ವಿಧೇಯಕಕ್ಕೆ ಜೆಡಿಎಸ್ ವಿರೋಧವಿದೆ. ಜೆಡಿಎಸ್‌ನ ಸಭಾಪತಿ ಇದ್ದರೆ ಮುಂದೆಯೂ ಇಂತಹ ವಿಧೇಯಕಗಳ ಅಂಗೀಕಾರಕ್ಕೆ ತೊಂದರೆಯಾಗಬಹುದು ಎಂಬ ಆತಂಕ ಬಿಜೆಪಿಗೂ ಇದೆ. ಹೀಗಾಗಿ, ಸಭಾಪತಿ ಸ್ಥಾನ ತಾವೇ ಪಡೆಯಲು ಬಿಜೆಪಿ ಬಯಸಿದೆ. ಹೀಗಾಗಿ, ಜೆಡಿಎಸ್ ತೀರಾ ಪಟ್ಟು ಹಿಡಿಯುವುದು ಅನುಮಾನ ಎನ್ನಲಾಗಿದೆ.